## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ನಂಬ್ರ: 1828-2014**

ಸರ್ಕಾರದ ಪರ
ಕೋಟಾ ಠಾಣಾ ಪೊಲೀಸರು. --- ಪಿರ್ಯಾದಿದಾರರು

-ಮತ್ತು-

1. ನಾಗು ಪೂಜಾರಿ, 60 ವರ್ಷ,
ತಂದೆ: ಚಿಕ್ಕ ಪೂಜಾರಿ..
ವಾಸ : ಕಬ್ಬೈಲು ಕಟ್ಟಿಗೆ ಮನೆ,
ಕನ್ಯಾನ, ಹಟ್ಟಿಯಂಗಡಿ ಗ್ರಾಮ,
ಕುಂದಾಪುರ ತಾಲೂಕು.

2. ಬಸವಾ ಪೂಜಾರಿ, 70 ವರ್ಷ,
ತಂದೆ: ನಂದಿ ಪೂಜಾರಿ..
ವಾಸ : ಅಕ್ಷಯ ನಿಲಯ,
ಹಲ್ತೂರು ಗ್ರಾಮ,
ಕುಂದಾಪುರ ತಾಲೂಕು.

3. ಪ್ರಧೀಪ ಪೂಜಾರಿ, 23 ವರ್ಷ,
ತಂದೆ: ನಾಗು ಪೂಜಾರಿ..
ವಾಸ : ಅಕ್ಷಯ ನಿಲಯ,
ಹಲ್ತೂರು ಗ್ರಾಮ,
ಕುಂದಾಪುರ ತಾಲೂಕು.

4. ಬಾಬಿ, 46 ವರ್ಷ,
ಗಂಡ: ನಾಗು.
ವಾಸ : ಕೆಳಬೆಟ್ಟು ಹಲ್ತೂರು,
ಉಲ್ತೂರು ಗ್ರಾಮ,
ಕುಂದಾಪುರ ತಾಲೂಕು. --- ಆರೋಪಿತರು

**:ದೋಷಾರೋಪಣೆ:**

ಶ್ರೀಮತಿ ರೋಹಿಣಿ .ಡಿ. ಬಿ.ಎ., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ:

ಕೋಟಾ ಪೋಲಿಸ್ ಠಾಣಾ ಸರಹದ್ದಿನಲ್ಲಿ, ಕುಂದಾಪುರ ತಾಲೂಕು, ಉಳ್ತೂರು ಗ್ರಾಮದ ಹಲ್ತೂರು ಎಂಬಲ್ಲಿ ದಿ. 08.05.2014 ರಂದು ಸಾಕ್ಷಿ 1 ನೇಯವರ ಮನೆಯ ವಠಾರ ಇರುವ ಹೊಂಡಗಳಿಗೆ ಮಣ್ಣನ್ನು ತುಂಬಿಸಿ ಸಮತಟ್ಟು ಮಾಡಲು ಟಿಪ್ಪರ್ನಿಂದ ಮಣ್ಣನ್ನು ತರಿಸುತ್ತಿರುವ ಸಮಯ 1.15 ಗಂಟೆಗೆ ಸಾಕ್ಷಿ 1 ಮತ್ತು 3 ನೇಯವರು ಟಿಪ್ಪರ್ ಬಳಿ ಹೋದಾಗ 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ 1 ಮತ್ತು 3 ನೇಯವನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಾಕ್ಷಿ 1 ಮತ್ತು 3 ನೇಯವರನ್ನು ಉದ್ದೇಶಿಸಿ ಬೇವರ್ಸಿ ಸೂಳೇ ಮಕ್ಕಳೇ ಟಿಪ್ಪರ್ ತಂದು ವಿದ್ಯುತ್ ಕಂಬ ಮುರಿಯುತ್ತೀರಾ?

ಎಂದು ಅವಾಚ್ಯ ಶಬ್ದದಿಂದ ಬೈದು ಅವಮಾನ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಆ ಪೈಕಿ 2 ರಿಂದ 4 ನೇ ಆರೋಪಿತರು ಸಾಕ್ಷಿ 2 ಮತ್ತು 3 ನೇಯವರಿಗೆ ಕೈಯಿಂದ ಹೊಡೆದು ಸ್ವಇಚ್ಚೆಯಿಂದ ಸಾಮಾನ್ಯ ಸ್ವರೂಪದ ಗಾಯವನ್ನು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

4. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಆ ಪೈಕಿ 1 ನೇ ಆಪಾದಿತರಾದ ನೀವು ಸಾಕ್ಷಿ 1 ನೇಯವರ ಮೇಲೆ ಕೈಹಾಕಿ ಅಲ್ಲೇ ಇದ್ದ ಉದ್ದವಾದ ಕಬ್ಬಿಣದ ರಾಡಿನಿಂದ ಸಾಕ್ಷಿ 1 ನೇಯವರ ಬೆನ್ನು ಹಾಗೂ ಕೈಗಳಿಗೆ ಹೊಡೆದು ಸ್ವಇಚ್ಚೆಯಿಂದ ತೀವ್ರ ಸ್ವರೂಪದ ಗಾಯವನ್ನು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 326 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

5. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಆ ಪೈಕಿ 2 ರಿಂದ 4 ನೇ ಆರೋಪಿತರು ಸಾಕ್ಷಿ 2 ಮತ್ತು 3 ನೇಯವರನ್ನು ಉದ್ದೇಶಿಸಿ "ಈ ದಾರಿಯಗಿ ಬಂದರೆ ಜೀವ ಸಹಿತ ಬಿಡುವುದಿಲ್ಲ" ಎಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 23.09.2022.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

Phs